

# ಬೆಕ್ಕುಗಳ ಉತ್ಸವ!







ಇದು ಬೆಕ್ಕುಗಳ ಹಬ್ಬ. ಬೆಲ್ಜಿಯಂನ ಯುಪ್ರೆಸ್ ಎಂಬ ನಗರದಲ್ಲಿ ಪ್ರತೀ ಮೂರು ವರ್ಷಗಳಿಗೊಮ್ಮೆ ಮೇ ತಿಂಗಳ ಎರಡನೆ ಬುಧವಾರದಂದು ನಡೆಯುವ ಈ ಬೆಕ್ಕುಗಳ ಉತ್ಸವ ವಿಶ್ವದಾದ್ಯಂತ ಹೆಸರುವಾಸಿ. ಕಳೆದ ಅರುವತ್ತು ವರ್ಷಗಳಿಂದ ಇಲ್ಲಿ ಪ್ರತೀ ವರ್ಷವೂ ಬೆಕ್ಕುಗಳ ಹಬ್ಬ ನಡೆಯುತ್ತದೆ. ವಿಶ್ವದ ಎಲ್ಲ ದೇಶಗಳ ಪ್ರವಾಸಿಗರನ್ನು ಸೆಳೆಯುತ್ತದೆ.

ಈ 'ಫೆಸ್ಟಿವಲ್ ಆಫ್ ದ ಕ್ಯಾಟ್ಸ್' ಹಬ್ಬದಲ್ಲಿ ಪ್ರಮುಖವಾಗಿ ಒಂದು ಮೆರವಣಿಗೆ ನಡೆಯುತ್ತದೆ. ಇದರಲ್ಲಿ ಯುವಕರು, ಯುವತಿಯರು, ವೃದ್ಧರು, ಮಕ್ಕಳು ಸೇರಿದಂತೆ ಸಾವಿರಾರು ಜನ ಪಾಲ್ಗೊಳ್ಳುತ್ತಾರೆ. ಎಲ್ಲರೂ ವಿಧವಿಧದ ವೇಷಭೂಷಣ ಧರಿಸಿ ಬೆಕ್ಕುಗಳ ನಾನಾ ರೂಪಗಳಾಗಿ ಕಾಣಿಸುತ್ತಾರೆ. ಬೆಕ್ಕುಗಳ ಮುಖವಾಡ ಅಥವಾ ಬಣ್ಣದಲ್ಲೇ ಬೆಕ್ಕಿನ ಮುಖದ ಚಿತ್ರಣ ಮೂಡಿಸುತ್ತಾರೆ. ಬೆಕ್ಕಿನ ಮುಖವಿರುವ ಕುದುರೆಗಳ ಮೇಲೆ, ರಾಜ ಮತ್ತು ರಾಣಿ ಬೆಕ್ಕುಗಳ ವೇಷಧಾರಿಗಳು ವೈಭವದಿಂದ ಅಲಂಕೃತರಾಗಿ ಮುಂಚೂಣಿಯಲ್ಲಿರುತ್ತಾರೆ.

ಇವೆಲ್ಲದರ ಜತೆಗೆ ಆಕರ್ಷಣೀಯವಾದ ಸ್ತಬ್ಧ ಚಿತ್ರಗಳು, ದಾಸಿ ಬೆಕ್ಕುಗಳು, ಇಲಿಗಳು, ಮಾಟಗಾತಿಯರ ವೇಷಧಾರಿಗಳೂ ಭಾಗವಹಿಸಿ ಬೆಕ್ಕಿನ ಉತ್ಸವಕ್ಕೆ ಕಳೆಕಟ್ಟುತ್ತಾರೆ. ಹಿತ್ತಾಳೆಯ ಬ್ಯಾಂಡುಗಳ ವಾದನದಲ್ಲಿ ಈ ವರ್ಣರಂಜಿತ ಮೆರವಣಿಗೆ ಬೀದಿಗಳಲ್ಲಿ ಸಾಗಿ ಇಗರ್ಜಿಯನ್ನು ತಲುಪುತ್ತದೆ. ಬಹು ಎತ್ತರದ ಗಂಟೆ ಗೋಪುರವನ್ನೇರಿ ಬೆಕ್ಕುಗಳ ಆಟಿಕೆಗಳನ್ನು ಸಾವಿರಾರು ಸಂಖ್ಯೆಯಲ್ಲಿ ಕೆಳಗೆಸೆಯುತ್ತಾರೆ. ವಿಶಿಷ್ಟ ರೀತಿಯಲ್ಲಿ ನಡೆಯುವ ಈ ಹಬ್ಬ ಸುಮಾರು ಮೂರು ತಾಸುಗಳ ಕಾಲ ನಡೆದು ಜನರನ್ನು ರಂಜಿಸುತ್ತದೆ.

■ ಪ. ರಾಮಕೃಷ್ಣ ಶಾಸ್ತ್ರಿ